## ಬದಲಾದ ಏಡ್ಸ್ ವೈರಸ್‌ನ ರೂಪ

ನಿರಂತರ ಬದಲಾವಣೆ ವಿಕಸನದ ಹಾದಿ. ಇದು ಏಡ್ಸ್‌ಗೆ ಕಾರಣವಾಗಿರುವ ಎಚ್‌ಐವಿ ರೋಗಾಣುವನ್ನೂ ಬಿಟ್ಟಿಲ್ಲ. ಏಡ್ಸ್ ರೋಗಕ್ಕೆ ಕಾರಣವಾಗಿರುವ ಎಚ್‌ಐವಿ ತನ್ನ ಸ್ವರೂಪವನ್ನು ನಿಧಾನವಾಗಿ ಬದಲಿಸಿದೆಯಂತೆ.

ರಕ್ತದ ಕಣದಲ್ಲಿರುವ ಎಚ್‌ಐವಿ, ವೀರ್ಯದಲ್ಲಿರುವ ಎಚ್‌ಐವಿ ವೈರಾಣುಗಿಂಥ ಭಿನ್ನವಾಗಿದೆಯಂತೆ. ಹೀಗಾಗಿ ವೀರ್ಯದಲ್ಲಿ ಕಂಡುಬಂದ ಎಚ್‌ಐವಿಯನ್ನು ಎಚ್‌ಐವಿ–1 ಎಂದು ಹೆಸರಿಸಲಾಗಿದೆ. ಚಾಪ್ ಹಿಲ್‌ನ ನಾರ್ಥ್ ಕ್ಯಾರೋಲಿನಾ ವಿಶ್ವವಿದ್ಯಾಲಯದಲ್ಲಿ ನಡೆಸಲಾದ ಸಂಶೋಧನೆ ಈ ವಿಷಯವನ್ನು ತಿಳಿಸಿದೆ.

## ಕಿವಿ ಕೇಳದವರ ದೃಷ್ಟಿ ಏಕೆ ಸೂಕ್ಷ್ಮ

ಕಿವಿ ಕೇಳದವರು ಹಾಗು ದೃಷ್ಟಿ ಇಲ್ಲದವರ ಇನ್ನಿತರ ಅಂಗಗಳು ಚುರುಕಾಗಿರುತ್ತವೆ ಎನ್ನುವುದು ಎಲ್ಲರಿಗೂ ತಿಳಿದ ಸಂಗತಿ. ಆದರೆ ಇದುವರೆಗೂ ಇದು ಹೇಗಾಗುತ್ತದೆ ಎಂದು ಯಾವ ಅಧ್ಯಯನವೂ ತಿಳಿಸರಲಿಲ್ಲ. ಆದರೆ ವೆಸ್ಟ್ರನ್ ಒಂಟಾರಿಯೋ ವಿಶ್ವವಿದ್ಯಾಲಯವು ಬೆಕ್ಕಿನ ಮೇಲೆ ನಡೆಸಿದ ಸಂಶೋಧನೆಯ ಪ್ರಕಾರ ಮೆದುಳಿನಲ್ಲಿ ದೃಷ್ಟಿಯನ್ನು ನಿಯಂತ್ರಿಸುವ ನ್ಯೂರಾನ್, ಶಬ್ದವನ್ನು ಗ್ರಹಿಸುವ ವ್ಯವಸ್ಥೆಯನ್ನು ನಿಯಂತ್ರಿಸುತ್ತದಂತೆ.

ಮನುಷ್ಯರನ್ನು ಹೊರತುಪಡಿಸಿದರೆ ಬೆಕ್ಕು ಮಾತ್ರ ಕಿವುಡಾಗಿ ಹುಟ್ಟುವ ಮತ್ತೊಂದು ಸಸ್ತನಿ. ಇದಕ್ಕಾಗಿ ಕಿವಿ ಕೇಳಿಸುವ ಬೆಕ್ಕು ಹಾಗೂ ಹುಟ್ಟಿನಿಂದಲೇ ಕಿವುಡಾದ ಬೆಕ್ಕನ್ನು ಪ್ರಯೋಗಕ್ಕೆ ಒಳಪಡಿಸಲಾಗಿತ್ತು.

## ಆರಂಭದಲ್ಲೇ ಶ್ವಾಸಕೋಶ ಕ್ಯಾನ್ಸರ್ ಪತ್ತೆ

ಶ್ವಾಸಕೋಶ ಕ್ಯಾನ್ಸರ್ ಪ್ರಪಂಚದಲ್ಲೇ ಭಯಾನಕ ಕ್ಯಾನ್ಸರ್ ಎಂಬ ಕುಖ್ಯಾತಿಗೆ ಈಗಾಗಲೇ ಪ್ರಸಿದ್ಧವಾಗಿದೆ. ಇದಕ್ಕೊಂದು ಪರಿಹಾರವನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ರೋಗಿಯ ಕೆನ್ನೆ ಅಣುಗಳ ತುಣುಕಿನಲ್ಲಿ ಬೆಳಕನ್ನು ಪ್ರವಹಿಸಿದಾಗ ಕ್ಯಾನ್ಸರ್ ಗುಣಲಕ್ಷಣ ಪತ್ತೆಯಾಗಲಿದೆ ಎಂದು ಈ ವರದಿ ತಿಳಿಸಿದೆ.

ಈ ರೀತಿ ಮನುಷ್ಯರಲಿ ಬರಬಹುದಾದಂತ ಶ್ವಾಸಕೋಶ ಕ್ಯಾನ್ಸರ್ ಅನ್ನು ಆರಂಭದಲ್ಲೇ ಪತ್ತೆ ಹಚ್ಚಬಹುದು ಎಂದು ನಾರ್ತ್‌ವೆಸ್ಟ್ ವಿಶ್ವವಿದ್ಯಾಲಯ ಹಾಗೂ ನಾರ್ತ್‌ಶೋರ್ ವಿಶ್ವವಿದ್ಯಾಲಯ ನಡೆಸಿದ ಜಂಟಿ ಪ್ರಯೋಗದಿಂದಾಗಿ ಕ್ಯಾನ್ಸರ್‌ಗೆ ಬಲಿಯಾಗುವವರ ಸಂಖ್ಯೆ ತಗ್ಗಿಸಬಹುದಾಗಿದೆ ಎಂದು ತಿಳಿಸಿದೆ.

## ಆರೋಗ್ಯವಂತ ಮನುಷ್ಯನ ಜನನ

ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬುದು ಗಾದೆ ಮಾತಾದರೂ, ಆರೋಗ್ಯವಂತ ಮನುಷ್ಯನ ಗುಣಲಕ್ಷಣಗಳು ಭ್ರೂಣದಿಂದಲೇ ನಿರ್ಧಾರವಾಗುತ್ತದೆ. ಮನುಷ್ಯರ ಭ್ರೂಣ ಕಟ್ಟುವಿಕೆಯಲ್ಲಿ ಮೂರನೇ ಎರಡರಷ್ಟು ಫಲ ನೀಡದೇ ವಿಫಲವಾಗುವುದೇ ಹೆಚ್ಚು. ಆದರೆ ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯ ಸಂಶೋಧಕರು ನಡೆಸಿದ ಸಂಶೋಧನೆಯಲ್ಲಿ ಯಾವ ತತ್ತಿ ಬೆಳವಣಿಗೆಯ ಕಷ್ಟದ ಹಾದಿಗಳನ್ನು ತುಳಿಯಲಿದೆ, ಯಾವುದು ಫಲಿತವಾಗದೆ ಸಾಯಲಿದೆ ಎಂಬ ವಿಷಯವನ್ನು ಶೇ 93ರಷ್ಟು ನಿಖರವಾಗಿ ತಿಳಿಸುವಲ್ಲಿ ಸಫಲರಾಗಿದ್ದಾರೆ. ಗರ್ಭಾಶಯದಲ್ಲಾಗುವ ಮೊದಲ ಕೋಶ ವಿಭಜನೆಯಲ್ಲೇ ಮುಂದೆ ಅದು ಜೀವಪಡೆಯುವ ಮನುಷ್ಯನ ಆರೋಗ್ಯದ ಸ್ಥಿತಿಗತಿಯನ್ನು ತಿಳಿಸುವಲ್ಲಿ ಈ ಸಂಶೋಧನೆ ಯಶಸ್ವಿಯಾಗಿದೆ.

■ ಇಎಸ್‌ಎಸ್

ಕಾರ್ಟೂನ್

